ಕಾಮೇನಾಡಿ

ಬಸವಂತ ಕೋಪ್ಪಿ
ಎಲ್ಲಪ್ಪಾ ಪಾಟೀಲ
ಓಮಣ್ಣಾ ಪಾಟೀಲ

ಕೋನಾಡ

ರಾಮಚಂದ್ರ ಕುಬಾರ

ಮಾಣಗಾಂವ

ಶಿವರುದ್ರಪ್ಪ ಕೋಶಿವಾಲೆ
ಕಲ್ಲೂ ಕುಂಬಾರ ತಿಂ. ೪೮

ಕುದನೂರ

ಸಿದ್ಧಪ್ಪ ಪೂಜಾರಿ
ಶಿವಲಿಂಗಪ್ಪ ಪಾಟೀಲ
ಸಿದ್ದಪ್ಪಾ ಹುಕ್ಕೇರಿ
ಸುಬ್ರಾವ ಮರತಳವಾರ
ಗಂಗಾರಾಮ ತಳವಾರ
ಪರಸು ಹರಿಜನ
ಈಶ್ವರ ಕೋರಿ
ಸಿದ್ರಾಮಪ್ಪ ಪಾಟೀಲ
ಸಂಕಪ್ಪಾ ಪಾಟೀಲ
ಸಿದಬಸಪ್ಪ ಡುಕರಿ
ಮಲ್ಲಪ್ಪ ರಾಚಂಣವರ
ರುದ್ರಪ್ಪ ಹರಿಜನ
ನಿಂಗಪ್ಪ ಗಚ್ಚಿ
ಭೀಮಪ್ಪ ನಿರ್ಮಂಣವರ
ಭರಮಾ ಮುತಕೇಕರ
ಬಾಳು ನಾಗರದಳೆ
ಪೈಜಪ್ಪ ಮುಕ್ಕಣ್ಣವರ

ಈ ತಾಲೂಕು ಈಗ ಕೊಲ್ಹಾಪೂರ
ಜಿಲ್ಲೆಯಲ್ಲಿದೆ

ಬೆಳಗಾವಿಯಲ್ಲಿ ಕ್ರಾಂತಿಕಾರರ ಸಂಘಟನೆ

ತರುಣರಿಗೆ ಬಾಂಬ ಪಿಸ್ತೂಲ ತರಬೇತಿ

೧೯೦೬ ರಿಂದ ೧೯೧೦ ರ ವರೆಗಿನ ಕಾಲದಲ್ಲಿ ಬೆಳಗಾವಿಯಲ್ಲಿ ಶ್ರೀ. ಗೋವಿಂದ ರಾವ ಯಾಳಗಿ, ಹಣಮಂತರಾವ ದೇಶಪಾಂಡೆ ಮೊದಲಾದವರು "ಮ್ಯಾಝಿನಿ ಕ್ಲಬ್" ಎಂಬ ಕ್ರಾಂತಿಕಾರಕ ಸಂಘಟನೆ ನಡೆಸುತ್ತಿದ್ದರು. ಆಗ ನಿಜಾಮ ರಾಜ್ಯದಲ್ಲಿದ್ದ ರಾಯ ಚೂರ ಕಡೆಯಿಂದ ಪಿಸ್ತೂಲುಗಳನ್ನು ಇವರು ದೊರಕಿಸಿದ್ದರು. ಕೊಲ್ಹಾಪೂರದ ಶ್ರೀ. ಮೋಡಕ್, ದಾಮೂ ಜೋಶಿ ಆದಿ ಕ್ರಾಂತಿಕಾರರಗೂಡ ಇವರ ಸಂಭಂಧವಿತ್ತು.

ಯೋಗಿ ಅರವಿಂದರ ತಮ್ಮ ಬಾರೀಂದ್ರ ಘೋಷ ಅವರಗೂಡ ೧೯೦೭ ರ ಸುರತ ಕಾಂಗ್ರೆಸಿನ ಕಾಲಕ್ಕೆ ಇವರು ಸಂಪರ್ಕ ಸಾಧಿಸಿದ್ದರು. ತರುಣರಿಗೆ ಪಿಸ್ತೂಲಿನಿಂದ ಗುರಿ ಹೊಡೆಯುವ ಹಾಗು ಬಾಂಬು ತಯಾರಿಸುವ ಶಿಕ್ಷಣ ಕೊಡಲಾಗುತ್ತಿತ್ತು. ಇಟಲಿಯ ಸ್ವಾತಂತ್ರ್ಯ ವೀರ ಮ್ಯಾಝಿನಿ ಗ್ಯಾರಿಬಾಲ್ಡಿ ಮೊದಲಾದವರ ಚರಿತ್ರೆಯ ಅಧ್ಯಯನ ಮ್ಯಾಝಿನಿ ಕ್ಲಬ್ಬಿನಲ್ಲಿ ನಡೆಯುತ್ತಿತ್ತು. ೧೯೦೬ ರಲ್ಲಿ ಶೆರೆಶಿಂದಿ ಆಂಗಡಿಗಳ ಮೇಲೆ ಪಿಕೆಂಟಿಂಗ ಮಾಡುವ ಚಳವಳಿ ಬೆಳಗಾವಿಯಲ್ಲಿ ರಭಸದಿಂದ ನಡೆಯಿತು. ಪುಣೆ ಮತ್ತು ಬೆಳಗಾವಿ ಇವು ಆಂದೋಲನದ ಕೇಂದ್ರಗಳಾಗಿದ್ದವು. ಆ ಚಳುವಳಿಯಲ್ಲಿ ಅನೇಕ ತರುಣರು ಭಾಗವಹಿಸಿ ಸೆರೆಮನೆ ಕಂಡರು. ಅವರು ಬುಧನದ ಕಾಲಕ್ಕೆ ಹಾಗು ಜೇಲಿನಿಂದ ಬಿಡುಗಡೆ ಆಗುವಾಗ "ವಂದೇ ಮಾತರಮ್" ಎಂದು ಜಯಘೋಷ ಮಾಡುತ್ತಿದ್ದುದರಿಂದ ಇವರು ವಂದೇ ಮಾತರಮ್ ಕೈದಿಗಳೆಂದು ಹೆಸರಾಗಿದ್ದರು. ಈ ಚಳುವಳಿಯಲ್ಲಿ ಭಾಗವಹಿಸಿದವರಿಗೆ ದಂಡವಾಗುತ್ತಿತ್ತು. ಶ್ರೀ. ಗೋವಿಂದರಾವ ಯಾಳಗಿ, ಪಾಚ್ಛಾಪೂರದ ಡಾ. ರಾಮಚಂದ್ರ ಜೋಶಿ ಮೊದಲಾದ ಸುಮಾರು ೧೦-೧೨ ಜನರು ದಂಡ ತುಂಬದೆ ಜೇಲಿಗೆ ಹೋದರು.

ದೇಶಪಾಂಡೆ ಹಣಮಂತರಾಯರ ಮೇಲೆ ಒಳಸಂಚಿನ ಖಟ್ಲೆ

೧೯೦೯ ರಲ್ಲಿ ಕೊಲ್ಹಾಪುರದ ಪೊಲಿಟಿಕಲ್ ಎಜಂಟ ಫೆರಿಸನನ್ನು ಕೊಲೆ ಮಾಡುವ ಒಳಸಂಚಿನಲ್ಲಿ ಅಂಗವಿದ್ದಬಗ್ಗೆ ಬೆಳಗಾವಿಯ ಶ್ರೀ ಹಣಮಂತರಾವ ದೇಶ ಪಾಂಡೆಯವರನ್ನು ಬಂಧಿಸಿ ಚಿತ್ರಹಿಂಸೆಗೆ ಗುರಿ ಮಾಡಲಾಯಿತು. ಶ್ರೀ. ಗಂಗಾಧರ ರಾವ ದೇಶಪಾಂಡೆ ಹಾಗೂ ಗೋವಿಂದರಾವ ಯಾಳಗಿಯವರನ್ನೂ ಈ ಪ್ರಕರಣದಲ್ಲಿ ಸೇರಿಸುವದಕ್ಕಾಗಿ ಹಣಮಂತರಾಯರಿಂದ ಅವರ ಹೆಸರು ಒಡನುಡಿಸುವದು ಪೋಲೀಸರ ಉದ್ದೇಶವಿತ್ತು. ಆದರೆ ಎಷ್ಟೇ ಪೀಡಿಸಿದರೂ ಹಣಮಂತರಾಯರು ಪಿಟ್ಟೆಂದು ಬಾಯಿ ಬಿಡಲಿಲ್ಲ, ಯಾರ ಹೆಸರನ್ನೂ ಹೇಳಲಿಲ್ಲ, ಕೊನಗೆ ಅವರ ಮೇಲೆ ಖಟ್ಲೆ ಹಾಕಲಾಯಿತು. ಆ ಖಟ್ಲೆಯಲ್ಲಿಯ ಸಾಕ್ಷಿದಾರರಾದ ಶ್ರೀ. ಪಾಚಲಗ ಹಾಗು ನಾಗಪ್ಪ ಇವರನ್ನು ಯಾಳಗಿ ಗೋವಿಂದರಾಯರು ಪೋಲೀಸರ ಕಣ್ಣು ತಪ್ಪಿಸಿ ಓಡಿಸಿ ಅವರು ಪೋಲೀಸರಿಗೆ ಎಂದೂ ಸಿಗದಂತೆ ಮಾಡಿದರು. ಪಾಚಲಗರು ಹರಿದ್ವಾರದ ಕಡೆಗೆ ಹಾಗು ನಾಗಪ್ಪನು ಹೊಸೂರ, ಗದಗ, ಬಮ್ಮಾಪೂರದ ಕಡೆಗೆ ತಲೆ ಮರೆಸಿಕೊಂಡಿರುವಂತೆ ಗೋವಿಂದರಾಯರು ವ್ಯವಸ್ಥೆ ಮಾಡಿದ್ದರು. ನಾಗಪ್ಪನು ಗೋವೆಯಲ್ಲಿದ್ದಾನೆಂದು ಸುದ್ದಿ ಮಾಡಿ ಪೋಲೀಸರು ಅವನನ್ನು ಅಲ್ಲಿ ಶೋಧಿಸಿ ವಿಫಲರಾಗುವಂತೆ ಮಾಡಿದರು. ಆ ಖಟ್ಲೆಯು ಹಣಮಂತ ರಾಯರಿಗೆ ನಾಮಮಾತ್ರ ದಂಡವಾಗಿ ಕೊನೆಗೊಂಡಿತು. ಈ ರೋಮಾಂಚನಕರ ಘಟನೆಗಳ ವಿವರಗಳು ಆಗ ಸಿಗದ್ದರಿಂದ ೧ ನೇ ಸಂಪುಟದಲ್ಲಿ ಇವುಗಳ ಉಲ್ಲೇಖ ಮಾಡುವದು ಸಾಧ್ಯವಾಗಲಿಲ್ಲ.